# ಅಪರೂಪದ ಹೃದಯ ಸಮಸ್ಯೆಗೆ ಯಶಸ್ವಿ ಶಸ್ತ್ರಚಿಕಿತ್ಸೆ

## ಜಯದೇವ ಹೃದ್ರೋಗ ತಜ್ಞರ ತಂಡದ ಮತ್ತೊಂದು ಸಾಧನೆ

■ **ಗಿರೀಶ್ ಕೋಟೆ,** ಬೆಂಗಳೂರು

ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯ ತಜ್ಞ ವೈದ್ಯರ ತಂಡಕ್ಕೆ ಮತ್ತೊಂದು ಹಿರಿಮೆಯ ಗರಿ ಸೇರ್ಪಡೆಯಾಗಿದೆ. ವ್ಯಕ್ತಿಯೊಬ್ಬರ ಅಪರೂಪದ ಹೃದಯ ಸಂಬಂಧಿ ಸಮಸ್ಯೆಯೊಂದಕ್ಕೆ ಆರು ಮಂದಿ ತಜ್ಞವೈದ್ಯರ ತಂಡ ಸತತ ಆರು ಗಂಟೆಗಳ ಕಾಲ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ಹೊಸ ಬದುಕು ನೀಡಿದ್ದಾರೆ.

20 ರಿಂದ 30 ಸಾವಿರ ಮಂದಿಯಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳುವ ಈ ಸಮಸ್ಯೆ ಬೆಂಗಳೂರಿನ ಚಾಮರಾಜಪೇಟೆ ನಿವಾಸಿ ಪ್ರವೀಣ್‌ಕುಮಾರ್ ಅವರಲ್ಲಿ ಕಾಣಿಸಿಕೊಂಡಿತ್ತು. ಅವರ ವಯಸ್ಸು 31. ಆದರೆ, ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮಾತ್ರ 15 ವರ್ಷಕ್ಕೇ ಸ್ಥಗಿತಗೊಂಡಿತ್ತು. ಇದರ ಜತೆಗೆ ಅವರ ಹೃದಯದಲ್ಲಿ ಹೃದಯ ಮತ್ತು ರಕ್ತನಾಳಗಳಿಗೆ ರಕ್ತವನ್ನು ಸರಬರಾಜು ಮಾಡುವ ಕೊಳವೆಯ ಗಾತ್ರ ತನ್ನ ಹಿಗ್ಗುವಿಕೆ ಸ್ಥಿತಿ ಕಳೆದುಕೊಂಡು ಕುಗ್ಗಿತ್ತು. ಅಗತ್ಯ ಪ್ರಮಾಣದಲ್ಲಿ ಮತ್ತು ರಭಸದಲ್ಲಿ ರಕ್ತ ಸಂಚಾರ ಆಗುತ್ತಿರಲಿಲ್ಲ.

ವೈದ್ಯರು ಪ್ರವೀಣ್‌ನನ್ನು ಪರೀಕ್ಷಿಸಿ ಅಡ್ಡ ಪರಿಣಾಮಗಳಿಗೆ ಮಾತ್ರ ಚಿಕಿತ್ಸೆ ಕೊಡುತ್ತಿದ್ದರು. ಆದರೆ, ಜಯದೇವ ತಜ್ಞರಾದ ಡಾ.ಕುಂಸಿ ಶ್ರೀಧರ್ ಮತ್ತು ಡಾ.ವರದರಾಜ್ ನೇತೃತ್ವದ ವೈದ್ಯರ ತಂಡ ಸಮಸ್ಯೆಯ ಮೂಲವನ್ನು ಪತ್ತೆ ಹಚ್ಚಿ, ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದೆ.

**ವಿಲಿಯಮ್ಸ್ ಬೇರನ್ ಸಿಂಡ್ರೋಮ್**

ವೈದ್ಯ ವಿಜ್ಞಾನದಲ್ಲಿ ಈ ಸಮಸ್ಯೆಗೆ 'ವಿಲಿಯಮ್ಸ್ ಬೇರನ್ ಸಿಂಡ್ರೋಮ್' ಎಂದು ಕರೆಯುತ್ತಾರೆ. 1961ರಲ್ಲಿ ವಿಲಿಯಮ್ ಬೇರನ್ ಎನ್ನುವ ತಜ್ಞ ಈ ಸಮಸ್ಯೆ ಮತ್ತು ಇದಕ್ಕೆ ಕಾರಣವಾಗುವ ಸಂಗತಿಗಳು ಮತ್ತು ಚಿಕಿತ್ಸಾ ವಿಧಾನವನ್ನು ವೈದ್ಯ ಜಗತ್ತಿಗೆ ನೀಡಿದ್ದರಿಂದ ಅವರ ಹೆಸರಿನಲ್ಲೇ ಈ ಸಮಸ್ಯೆಯನ್ನು ಹೆಸರಿಸಲಾಗುತ್ತಿದೆ. ಇದೊಂದು ಅನುವಂಶಿಕವಾಗಿ ಬರುವ ಸಮಸ್ಯೆ.

ಈ ಸಮಸ್ಯೆಯಿಂದ ಹೃದಯ ಮತ್ತು ರಕ್ತನಾಳಗಳಿಗೆ ಸಂಪರ್ಕ ಕಲ್ಪಿಸುವ ಮತ್ತು ಕೇಂದ್ರ ನರಮಂಡಲದ ವ್ಯವಸ್ಥೆಯಲ್ಲಿ ವಿಪರೀತ ಏರುಪೇರಾಗಿರುತ್ತದೆ. ಇದರ ತಕ್ಷಣದ ಪರಿಣಾಮಗಳು ಬುದ್ಧಿಮಾಂದ್ಯತೆ, ಅಸಹಜ ಚಹರೆ ಮೂಲಕ ಗೋಚರವಾಗುತ್ತದೆ ಎಂದು ವಿಲಿಯಮ್ಸ್ ಬೇರನ್ ಗುರುತಿಸಿದ್ದರು.

ಇದಲ್ಲದೆ, ಅಡ್ಡ ಪರಿಣಾಮಗಳಲ್ಲಿ ರಕ್ತದಲ್ಲಿ ಕ್ಯಾಲ್ಸಿಯಂ ಅಂಶ ಅಗತ್ಯಕ್ಕಿಂತ ವಿಪರೀತ ಹೆಚ್ಚಾಗಿ ಸಂಗ್ರಹವಾಗುತ್ತದೆ. ಹತ್ತು ಮೆಟ್ಟಲು ಹತ್ತಿದರೂ ಎದೆಬಡಿತ ಜೋರಾಗಿ, ಏದುಸಿರು ಬಿಡುವಂತಾಗುತ್ತದೆ, ಹೈಪರ್ ಟೆನ್ಷನ್, ವಿಪರೀತ ರಕ್ತದ ಒತ್ತಡ, ಡಯಾಬಿಟಿಕ್ ಕೂಡ ಒಂದರ ಹಿಂದೊಂದರಂತೆ ಕಾಣಿಸಿಕೊಳ್ಳುತ್ತವೆ.

ಸಹಸ್ರಾರು ತೆರೆದ ಹೃದಯ ಶಸ್ತ್ರಚಿಕಿತ್ಸೆ ನೆವೇರಿಸಿರುವ ಡಾ.ಕುಂಸಿ ಶಿ ಧರ್ ಮತ್ತು ವರದರಾಜ್ ತಂಡ ಈ ರೀತಿಯ ಶಸ್ತ್ರಚಿಕಿತ್ಸೆ ನಡೆಸಿರುವುದು ಇದೇ ಮೊದಲು. ಪ್ರವೀಣ್ ಕುಮಾರ್ ಶನಿವಾರ ಆಸ್ಪತ್ರೆಯಿಂದ ಬಿಡುಗಡೆ ಆಗಿ ಖುಷಿಯಿಂದ ಮನೆಗೆ ತೆರಳಿದರು. ಅದಕ್ಕೂ ಮೊದಲು ತನಗೆ ಹೊಸ ಬದುಕು ನೀಡಿದ ವೈದ್ಯರ ತಂಡಕ್ಕೆ ಕೃತಜ್ಞತೆ ಸಲ್ಲಿಸಿದರು.



ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯಲ್ಲಿ ಅಪರೂಪದ ಹೃದಯ ಸಮಸ್ಯೆಗೆ ಯಶಸ್ವೀ ಶಸ್ತ್ರಚಿಕಿತ್ಸೆ ನಡೆಸಿದ ತಜ್ಞರು ಮತ್ತು ವೈದ್ಯರ ತಂಡದೊಂದಿಗೆ ಚಿಕಿತ್ಸೆಗೊಳಗಾದ ಪ್ರವೀಣ್ ಕುಮಾರ್.

### ಸಿಂಡ್ರೋಮ್‌ನ ಲಕ್ಷಣಗಳು

**ಮಕ್ಕಳಲ್ಲಿ ವಿಲಿಯಮ್ಸ್ ಬೇರನ್ ಸಿಂಡ್ರೋಮ್ ಇದ್ದರೆ, ಸಮಯಕ್ಕೆ ಸರಿಯಾಗಿ ಮಕ್ಕಳು ತೆವಳುವುದು, ಹೆಜ್ಜೆ ಹಾಕುವುದು, ಮಾತಾಡುವುದು ಇತ್ಯಾದಿ ಮಾಡುವುದಿಲ್ಲ. ಎಲ್ಲ ಚಟುವಟಿಕೆಯಲ್ಲೂ ನಿಧಾನ ಆಗುತ್ತಿರುತ್ತದೆ. ಕೆಲವರು ಕೇವಲ ಬುದ್ಧಿಮಾಂದ್ಯತೆ ಎಂದುಕೊಂಡು ಸುಮ್ಮನಾಗುತ್ತಾರೆ.**

**ವಿಲಿಯಮ್ಸ್ ಬೇರನ್ ಸಿಂಡ್ರೋಮ್ ಅಪರೂಪವಾಗಿ ಕಾಣಿಸಿಕೊಳ್ಳುವ ಹೃದಯ ಸಂಬಂಧಿ ಸಮಸ್ಯೆ. ಈ ಸಮಸ್ಯೆಯ ಶಸ್ತ್ರಚಿಕಿತ್ಸೆ ನಡೆಸಿದ್ದು ಇದೇ ಮೊದಲು. ಬಹಳಷ್ಟು ಮಂದಿ ಈ ಸಮಸ್ಯೆಯನ್ನು ಪರೀಕ್ಷಿಸಿಕೊಂಡವರೂ ಪರಿಹಾರವೇ ಇಲ್ಲ ಎಂದುಕೊಳ್ಳುತ್ತಾರೆ. ಆದರೆ, ಆಸ್ಪತ್ರೆಯ ತಜ್ಞರ ತಂಡ ಅದಕ್ಕೂ ಪರಿಹಾರ ಕಂಡುಕೊಂಡು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿದೆ.**

**-ಡಾ.ಕುಂಸಿ ಶ್ರೀಧರ್**
ಹೃದ್ರೋಗ ತಜ್ಞರು, ಜಯದೇವ

ದಿ. 27-12-2015.